ಇಂದು ದಿಃ**13-03-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಕೆ.ಜಿ ವಕೀಲರಿಂದ ವಾದಿಗಳ ಪರಃ**

ನಾನು ರಾಣೇಬೆನ್ನೂರಿನಲ್ಲಿ ಖಾಸಗೀ ಇಂಜನೀಯರಿಂಗ್ ಕಾಲೇಜ್ ನಲ್ಲಿ ಉಪನ್ಯಾಸಕ ಎಂದು ಕೆಲಸ ಮಾಡುತಿದ್ದೇನೆ ಎಂದರೆ ಸರಿ. ನಾನು ಹರಿಹರದಲ್ಲಿ ವಾಸ ಇರುತ್ತೇನೆ. ದಾವಾ ಆಸ್ತಿಗಳನ್ನು ನಾನೇ ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿ. ಈವರೆಗೂ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲುವಿಭಾಗ ಆಗಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ ಆಸ್ತಿಗಳು ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಕುಟುಂಬದ ಎಲ್ಲಾ ಆಸ್ತಿಗಳನ್ನು ವಾದಿ ಸೇರಿಸಿದ್ದಾನೆ ಎಂದರೆ ಸರಿ. ಸಾಕ್ಷಿ ಆದರೆ ಕುಟುಂಬದ ಬಂಗಾರ ಮತ್ತು ಬೆಳ್ಳಿಯ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಬಿ.ಹೆಚ್ ಗಿರಿಗೌಡ ಈತನ ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ವಾದಿ ಪಕ್ಷಗಾರ ಎಂದು ಕಾಣಿಸಿದ್ದಾನೆ ಎಂದರೆ ಸರಿ. ಶೆಡ್ಯೂಲ್ ಬಿ ಐಟಂ ನಂಬರ್ 4 ಮತ್ತು 5 ಆಸ್ತಿಗಳು ಇವುಗಳನ್ನು ನನ್ನ ತಂದೆ ಜೀವಂತ ಇದ್ದಾಗ ನನ್ನ ಸಹೋದರ ರಾಜಶೇಖರ ಈತನ ಹೆಸರಿನಲ್ಲಿ ಖರೀದಿ ಮಾಡಿದ್ದು ಎಂದರೆ ಸರಿ.

ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಸಮ ಹಿಸ್ಸೆ ಇದೆ ಎಂದರೆ ಸರಿ.

**ಪಾಟೀ ಸವಾಲಿಗೆ 4 ಮತ್ತು 5 ನೇ ಪ್ರತಿವಾದಿಯರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.